ದಿನಾಂಕ: 02.04.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಕೆ ಎಂ ಎನ್ ವಕೀಲರಿಂದಃ**

ಬಸಣ್ಣ ಯಾನೆ ಅಂಗಡಿ ಬಸಣ್ಣ ಎಂದರೆ ನನ್ನ ತಾತ ಎಂದರೆ ಸರಿ . ಅವರ ಹೆಂಡತಿ ದಾನಮ್ಮ. ಅವರಿಗೆ 7 ಜನ ಮಕ್ಕಳು . ಅವರ ಹೆಸರು ಲೋಕಮಾತ , ಮಂಜುನಾಥ , ಮಹಂತೇಶ , ತಿಪ್ಪಮ್ಮ , ವೀರಭದ್ರಪ್ಪ , ಅನುಸೂಯಮ್ಮ, ಶೈಲಜ ಎಂದರೆ ನಿಜ. 1 ರಿಂದ 5 ನೇ ಪ್ರತಿವಾದಿಯರಾದ ನಾವು ಲೋಕಮಾತ ಇವರ ಮಕ್ಕಳು ಎಂದರೆ ನಿಜ. ದಾವಾಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. 18.10.2023 ರಲ್ಲಿ ದಾವಾಸ್ತಿಗೆ ಸಂಬಂಧಪಟ್ಟ ವಿಭಾಗ ಪತ್ರದಲ್ಲಿ ನಾನು ಪಕ್ಷಗಾರನಾಗಿರುವುದಿಲ್ಲ. ಅದರಂತೆ ವಾದಿ ಕೂಡ ಆ ವಿಭಾಗ ಪತ್ರದಲ್ಲಿ ಪಕ್ಷಗಾರರು ಅಲ್ಲ ಎಂದರೆ ನಿಜ. ದಾವಾಸ್ತಿಯಲ್ಲಿ ವಾದಿಗೂ ಕೂಡ ಸಮಾನ ಹಕ್ಕು ಇದೆ ಎಂದರೆ ನಿಜ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು